| ಕ್ರ. ಸಂ. | ಕಾಮಗಾರಿಯ ವಿವರ | ಔರಾದ | ಬೀದರ್ | ಭಾಲ್ಕಿ | ಬಸವ ಕಲ್ಯಾಣ | ಹುಮ್ನಾಬಾದ | ಒಟ್ಟು |
|---|---|---|---|---|---|---|---|
| 1 | ನೆಡುತೋಪು ನಿರ್ಮಾಣ (ಹೆ.ನಲ್ಲಿ) | 93 | 341 | 56.5 | 297.5 | 1142 | 1903 |
| 2 | ನೆಡುತೋಪು ನಿರ್ಮಾಣಕ್ಕೆ ನೆಡಬೇಕಾಗಿರುವ ಸಸಿಗಳು (ಲಕ್ಷಗಳಲ್ಲಿ) | 1.138 | 3.036 | 0.673 | 3.344 | 11.407 | 19.598 |
| 3 | ನೆಡುತೋಪು ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗುವ ಅನುದಾನ (ರೂ.ಲಕ್ಷಗಳಲ್ಲಿ) | 15.017 | 53.012 | 9.668 | 47.381 | 148.319 | 273.397 |

ಸಂಖ್ಯೆ: ಅಪಜೀ 55 ಎಫ್‌ಟಿಎಸ್ 2012.

**ವಿಶ್ವ ಬಂಡವಾಳ ಸಮಾವೇಶ**

**609 (598) ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)** : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ನೀಲಗಿರಿ ತೋಪುಗಳನ್ನು ಬೆಳೆಸಲು ನಿಷೇಧವಿದ್ದರೂ ನೀಲಗಿರಿ ಗಿಡಗಳನ್ನು ಬೆಳೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ; ಕ್ರಮ ಕೈಗೊಳ್ಳದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು);

**ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು)** :

ಅ) ರಾಜ್ಯದ ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ಮಾತ್ರ ನೀಲಗಿರಿ ಬೆಳೆಸುವುದನ್ನು ನಿಷೇಧಿಸಿ ದಿನಾಂಕ: 19–03–2011 ರಂದು ಸರ್ಕಾರವು ಸುತ್ತೋಲೆ ಹೊರಡಿಸಿದೆ. ನಂತರದ ಅವಧಿಯಲ್ಲಿ ಮಲೆನಾಡು ಮತ್ತು ಅರೆ ಮಲೆನಾಡು ಪ್ರದೇಶಗಳಲ್ಲಿ ನೀಲಗಿರಿ ಬೆಳೆಸಿದ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಸದರಿ ಸುತ್ತೋಲೆಯ ಪ್ರಕಾರ ಬಯಲು ಸೀಮೆಯ ಮಧ್ಯಮ ಫಲವತ್ತತೆ ಇರುವ ಪ್ರದೇಶಗಳು ಮತ್ತು ಗಡಿನಾಡು ಪ್ರದೇಶದ ಕಡಿಮೆ ಫಲವತ್ತತೆ ಇರುವ ಬೆಟ್ಟ ಪ್ರದೇಶಗಳಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಬಹುದಾಗಿರುತ್ತದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

**ಅರಣ್ಯದಲ್ಲಿ ಬೆಂಕಿ**

**548 (794) ಡಾ. ಮಹದೇವಪ್ಪ ಹೆಚ್.ಸಿ. (ಟಿ. ನರಸೀಪುರ) :** ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಅರಣ್ಯಗಳಾದ ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶಗಳಿಗೆ ಬೆಂಕಿಬಿದ್ದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಅರಣ್ಯಗಳಲ್ಲಿ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ಬಿದ್ದಿದ್ದು, ಅದರಿಂದ ಇಲಾಖೆಗೆ ಹಾಗೂ ರಾಜ್ಯದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಿದೆ ಎಂಬುದರ ಬಗ್ಗೆ ಸಮಗ್ರ ಮಾಹಿತಿ ಒದಗಿಸುವುದು;

ಇ) ಅರಣ್ಯ ಪ್ರದೇಶಕ್ಕೆ ಬಿದ್ದ ಬೆಂಕಿಯಿಂದ ಸದರಿ ಇಲಾಖೆಯ ಯಾವ ಯೋಜನೆಗಳಿಗೆ ನಷ್ಟವಾಗಿದೆ ಮತ್ತು ಈ ಯೋಜನೆಗಳ ಮುಂದಿನ ಗತಿಯೇನು ಎಂಬ ಬಗ್ಗೆ ಸಂಪೂರ್ಣ ವಿವರ ನೀಡುವುದು;

ಈ) ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಟೈಗರ್ ಪ್ರಾಜೆಕ್ಟ್‌ಗೆ ಈ ಕಾಡ್ಗಿಚ್ಚಿನಿಂದ ಉಂಟಾಗಿರುವ ತೊಂದರೆಗಳೇನು ಮತ್ತು ಅ ತೊಂದರೆಗಳನ್ನು ಯಾವ ರೀತಿಯಲ್ಲಿ ನಿಭಾಯಿಸಲಾಗಿದೆ ಎಂಬ ಬಗ್ಗೆ ಪೂರ್ಣ ವಿವರ ನೀಡುವುದು;

ಉ) ರಾಜ್ಯದ ಅರಣ್ಯ ಪ್ರದೇಶಕ್ಕೆ ಆಗಿಂದಾಗ್ಗೆ ಬೆಂಕಿ ಬೀಳುತ್ತಿರುವುದು ಕಿಡಿಗೇಡಿಗಳ ಕೃತ್ಯವೊ ಅಥವಾ ಬೇರೆ ಇನ್ನೇನಾದರೂ ಕಾರಣವಿದೆಯೇ ಎಂಬ ಬಗ್ಗೆ ವಿವರ ನೀಡುವುದು;